ಹುಬ್ಬಳ್ಳಿ ನಗರಕ್ಕೆ ಹೆಚ್ಚುವರಿ ತಹಶೀಲ್ದಾರರ ನೇಮಕ

3303 (3314) : ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ಶಹರ ವ್ಯಾಪ್ತಿಯಲ್ಲಿ ಸುಮಾರು 9 ಲಕ್ಷ ಜನಸಂಖ್ಯೆ ಇದ್ದು, ಒಬ್ಬರೇ ತಹಶೀಲ್ದಾರರು ಕಾರ್ಯನಿರ್ವಹಿಸುತ್ತಿರುವುದರಿಂದ ನಾಗರೀಕರಿಗೆ ಅತಿ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;

ಇ) ಇಬ್ಬರು ತಹಶೀಲ್ದಾರರು ಕಾರ್ಯಪ್ರವೃತ್ತರಾಗುವಂತೆ ಸರ್ಕಾರ ಯಾವಾಗ ಆದೇಶ ಮಾಡುವುದು;

ಈ) ಸಾರ್ವಜನಿಕರ ತೊಂದರೆ ಹೋಗಲಾಡಿಸಲು ಸರ್ಕಾರ ಕೈಗೊಂಡ ತುರ್ತು ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಬಂದಿರುತ್ತದೆ.

ಆ) ಹುಬ್ಬಳ್ಳಿ ನಗರಕ್ಕೆ ಹೆಚ್ಚುವರಿಯಾಗಿ ಒಬ್ಬ ವಿಶೇಷ ತಹಶೀಲ್ದಾರರನ್ನು ನೇಮಿಸುವ ವಿಷಯವು ಸರ್ಕಾರದ ಮುಂದಿದೆ.

ಇ) ಸರ್ಕಾರವು ಶೀಘ್ರವೇ ಈ ಬಗ್ಗೆ ಒಂದು ನಿರ್ಧಾರ ಕೈಗೊಳ್ಳಲಿದೆ.

ಈ) ಈ ವಿಷಯವು ಸರ್ಕಾರವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ರಾಜ್ಯದಲ್ಲಿರುವ ಕೆಲವು ಕಾರ್ಖಾನೆಗಳಿಂದ ಹೊರ ಬರುವ ರಾಸಾಯನಿಕರಿಂದ ಪರಿಸರ ಮಾಲಿನ್ಯ

3304 (3756) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ವಾರ್ತಾ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೆಲವು ಕಾರ್ಖಾನೆಗಳು ಕಾರ್ಖಾನೆಯಲ್ಲಿ ಉಪಯೋಗಿಸಿದ ರಾಸಾಯನಿಕ ನೀರನ್ನು ಕೆರೆಗಳಿಗೆ ಹಾಗೂ ಹಳ್ಳಗಳಿಗೆ ಬಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ನೀರನ್ನು ಉಪಯೋಗಿಸಿದ ಹಳ್ಳಿಗಳ ಜನರು ಹಾಗೂ ಜಾನುವಾರುಗಳು ತೊಂದರೆಯನ್ನು ಅನುಭವಿಸುತ್ತಿರುವುದಲ್ಲದೆ ಬೆಳೆಯನ್ನು ಬೆಳೆಯಲು ತೊಂದರೆಯಾಗಿರುವುದು ನಿಜವೇ;

ಇ) ಇದುವರೆಗೂ ಎಷ್ಟು ದೂರುಗಳು ಬಂದಿವೆ; ಆ ಕಾರ್ಖಾನೆಗಳು ಯಾವುವು;

ಈ) ದೂರುಗಳು ಬಂದಿದ್ದರೆ, ರಾಜ್ಯಾದ್ಯಂತ. ಪರಿಸರ ಮಾಲಿನ್ಯ ಮಾಡುತ್ತಿರುವ ಇಂತಹ ಕಾರ್ಖಾನೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತಂತೆ 21 ಉದ್ದಿಮೆಗಳ ಮೇಲೆ ದೂರುಗಳು ಬಂದಿವೆ. ಈ ಕುರಿತಂತೆ (ಈ) ನಂತೆ ಕ್ರಮ ಜರುಗಿಸಲಾಗಿದೆ.

ಆ) ಕೆಲವೊಂದು ಪ್ರಕರಣಗಳಲ್ಲಿ ದೂರು ಬಂದಿದ್ದು (ಈ) ನಲ್ಲಿ ತಿಳಿಸಿರುವಂತೆ ಮಾಲಿನ್ಯಕಾರಕ ಉದ್ಯಮಗಳ ವಿರುದ್ಧ ಕ್ರಮ ಜರುಗಿಸಲಾಗಿದೆ.